■ ವಿಶಾಖ ಎನ್.



# ಸಾಯಿ ಪಲ್ಲವಿಯ ನಿದ್ರಾ ಸಮಯ

'ನಾನು ಹೀಗೆ ಬದುಕಬೇಕೆ' ಎಂಬ ಪ್ರಶ್ನೆ ಐದು ವರ್ಷಗಳ ಹಿಂದೆ ನಟಿ ಸಾಯಿ ಪಲ್ಲವಿ ಅವರನ್ನು ಕಾಡಿತ್ತು. ಅದಕ್ಕೆ ಕಾರಣವಾಗಿದ್ದುದು 'ಶ್ಯಾಮ್ ಸಿಂಘ ರಾಯ್' ತೆಲುಗು ಸಿನಿಮಾ ಚಿತ್ರೀಕರಣ.

ಸಾಯಿ ಪಲ್ಲವಿ ಅಭಿನಯಿಸಿದ್ದ ಬಹುಪಾಲು ಸನ್ನಿವೇಶಗಳ ಚಿತ್ರೀಕರಣವು ರಾತ್ರಿ ಹೊತ್ತು ನಡೆಯುತ್ತಿತ್ತು. ಗಂಟೆ 9 ಹೊಡೆದರೆ ನಟಿಯ ಮನಸ್ಸು ಕಲ್ಲವಿಲಗೊಳ್ಳುತ್ತಿತ್ತು. ಕಣ್ಣುಗಳು ತಂತಾವೇ ಮುಚ್ಚುವ ಸ್ಥಿತಿ ತಲುಪುತ್ತಿದ್ದವು. ಆದರೂ ಹೇಗೋ ಕಷ್ಟಪಟ್ಟು ಕ್ಯಾಮೆರಾ ಕಣ್ಣಿಗೆ ಮುಖವೊಡ್ಡಿ ನಿಲ್ಲುವುದು ಅನಿವಾರ್ಯವಾಗಿತ್ತು. ಒಂದೆರಡು ದಿನಗಳಾಗಿದ್ದಿದ್ದರೆ ಚಿಂತೆ ಇರುತ್ತಿರಲಿಲ್ಲ. ಮೂವತ್ತು ದಿನಗಳ ಅವಧಿಯ ಚಿತ್ರೀಕರಣ ಅದಾಗಿತ್ತು. ಕೆಲವು ದಿನಗಳು ಸರಿದ ನಂತರ, ಒಮ್ಮೆ ಸಾಯಿ ಪಲ್ಲವಿ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಅದನ್ನು ಅವರ ತಂಗಿ ನೋಡಿ, ನಿರ್ಮಾಪಕರ ಬಳಿಗೆ ಓಡಿಹೋಗಿ ಹೇಳಿಕೊಂಡರು. ಒಂದು ದಿನವಾದರೂ ಪುರುಸೊತ್ತು ಸಿಕ್ಕಿದರೆ ತನ್ನ ಮನಸ್ಸು ಹಗೂರಾದೀತು ಎನ್ನುವುದು ನಟಿಯ ಮನವಿಯಾಗಿತ್ತು.

ನಿರ್ಮಾಪಕ ವೆಂಕಟ್ ಬೋಯನಪಲ್ಲಿ ಅವರಿಗೆ ನಟಿ ಅತ್ತಿದ್ದು ಬಹಳ ಬೇಸರ ತರಿಸಿತು. ಅವರು ತಕ್ಷಣವೇ, 'ಒಂದಲ್ಲ, ಹತ್ತು ದಿನ ಬಿಡುವು ಪಡೆದುಕೊಂಡು, ಮನಸ್ಸನ್ನು ತಿಳಿಗೊಳಿಸಿಕೊಂಡು ಬರಲಿ' ಎಂದು ಅನುಮತಿ ಕೊಟ್ಟರು. ನಿರ್ದೇಶಕ ರಾಹುಲ್ ಸಾಂಕೃತ್ಯಾಯನ್ ಸೇರಿದಂತೆ ಇಡೀ ಚಿತ್ರತಂಡದ ಕಣ್ಣಿಗೆ ಆಗ ಸಾಯಿ ಪಲ್ಲವಿ ಥೇಟ್ ಮಗುವಿನಂತೆ ಕಂಡಿದ್ದರು. ಇದನ್ನು ಖುದ್ದು ಸಾಯಿ ಪಲ್ಲವಿ ಅವರೇ ಸಂದರ್ಶನಗಳಲ್ಲಿ ಹೇಳಿಕೊಂಡಿದ್ದಾರೆ. ಚಿತ್ರತಂಡದ ಎಲ್ಲರೂ ನಟಿಯ ಮನಸ್ಸಿಗೆ ಆಗಿದ್ದ ಗಾಸಿಗೆ ಮುಲಾಮು ಹಚ್ಚುವಷ್ಟು ಮಾನವೀಯತೆ ತೋರಿದ ಸ್ಮರಣೀಯ ಗಳಿಗೆ ಅದಾಗಿತ್ತು.

ಸಾಯಿ ಪಲ್ಲವಿ ಎಂ.ಬಿ.ಬಿ.ಎಸ್ ಅಧ್ಯಯನ ಮಾಡಿದ್ದು ಜಾರ್ಜಿಯಾದಲ್ಲಿ. ಆಗ ನಿತ್ಯವೂ ರಾತ್ರಿ 9ಕ್ಕೆ ಮಲಗುವುದು, ಬೆಳಿಗ್ಗೆ 3.30–4ಕ್ಕೆ ಏಳುವುದು ಅವರಿಗೆ ಅಭ್ಯಾಸವಾಯಿತು. ಅದನ್ನು ಬದುಕಿನುದ್ದಕ್ಕೂ ರೂಢಿಸಿಕೊಂಡರು. ನಟಿಯಾದ ನಂತರವೂ ಅವರ ಮಲಗುವ, ಏಳುವ ಸಮಯದಲ್ಲಿ ಬದಲಾವಣೆ ಆಗಲಿಲ್ಲ. ಇದೇ ಕಾರಣಕ್ಕೆ ರಾತ್ರಿ ಹೊತ್ತು ಚಿತ್ರೀಕರಣವಿದ್ದರೆ ಅವರಿಗೆ ಕಸಿವಿಸಿಯಾಗುತ್ತಿತ್ತು.

ಒಂದೊಮ್ಮೆ ತಡವಾಗಿ ಮಲಗಿದರೂ ಸಾಯಿ ಪಲ್ಲವಿ ಅವರಿಗೆ ಬೆಳಿಗ್ಗೆ 4ರ ಹೊತ್ತಿಗೆ ಎಚ್ಚರವಾಗಿಬಿಡುತ್ತದೆ. ಹಗಲು ಹೊತ್ತು ನಿದ್ರಿಸಿ, ಸರಿಮಾಡಿಕೊಳ್ಳಲು ಅವರ ದೇಹವೇ ಅನುಮತಿ ಕೊಡುತ್ತಿರಲಿಲ್ಲ. ಹೀಗಾಗಿ ನಿದ್ದೆಗೆಟ್ಟರೂ ಅದನ್ನು ಹೇಗೋ ತುಂಬಿಕೊಳ್ಳುವುದು ಅಸಾಧ್ಯವಾಗುತ್ತಾ ಹೋಯಿತು.

ಈಗ ಬಹುತೇಕ ನಿರ್ದೇಶಕ, ನಿರ್ಮಾಪಕರಿಗೆ ಸಾಯಿ ಪಲ್ಲವಿ ಅವರ ಮಲಗುವ ಸಮಯದ ಅರಿವಿದೆ. ಹೀಗಾಗಿ ಅದನ್ನು ತಲೆಯಲ್ಲಿ ಇಟ್ಟುಕೊಂಡೇ ಅವರ ಕಾಲ್‌ಷೀಟ್ ಪಡೆಯುತ್ತಾರೆ. ಜುನೈದ್ ಖಾನ್ ಅವರೊಟ್ಟಿಗೆ ಸಾಯಿ ಪಲ್ಲವಿ ಅಭಿನಯಿಸಿರುವ 'ಏಕ್ ದಿನ್' ಹಿಂದಿ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ದೊಡ್ಡ ಬಜೆಟ್‌ನಲ್ಲಿ ತಯಾರಾಗುತ್ತಿರುವ, ನಿತೇಶ್ ತಿವಾರಿ ನಿರ್ದೇಶನದ 'ರಾಮಾಯಣ' ಚಿತ್ರದಲ್ಲಿ ಸೀತೆಯ ಪಾತ್ರದಲ್ಲಿ ಅವರು ಅಭಿನಯಿಸುತ್ತಿದ್ದಾರೆ. ಅಷ್ಟೆಲ್ಲ ಕಷ್ಟಪಟ್ಟಿದ್ದ 'ಶ್ಯಾಮ್ ಸಿಂಘ ರಾಯ್' ಸಿನಿಮಾ ದೊಡ್ಡ ಲಾಭವನ್ನೇನೂ ತರಲಿಲ್ಲವಾದರೂ, ನಾನಿ ಹಾಗೂ ಸಾಯಿ ಪಲ್ಲವಿ ಅಭಿನಯ ಅನೇಕರ ಮನಸೂರೆಗೊಂಡಿತು. ■



ಜಾಸ್ಮಿನ್ ಸ್ಯಾಂಡಲ್ಸ್
(ಇನ್‌ಸ್ಟಾಗ್ರಾಂ ಚಿತ್ರ)

# ಜಾಸ್ಮಿನ್ ನಾದದಲೆ

ಪಂಜಾಬಿ ಗಾಯಕಿಯರಿಗೆ ಕೂಡ ತುಸು ಗಡುಸಾದ ಕಂಠವಿರುತ್ತದೆ. 'ಹೈವೇ' ಸಿನಿಮಾದಲ್ಲಿ ಜ್ಯೋತಿ ಹಾಗೂ ಸುಲ್ತಾನಾ ನೂರಾನ್ ಸಹೋದರಿಯರು ಹಾಡಿದ್ದ 'ಪಟಾಕಾ ಗುಡ್ಡಿ' ಹಾಡು ಅದಕ್ಕೊಂದು ಉದಾಹರಣೆ. ಅವರು ಎಷ್ಟೋ ಸಂಗೀತ ಕಾರ್ಯಕ್ರಮದಲ್ಲಿ ಥಟ್ಟನೆ ಸೆಳೆಯುವ ತಮ್ಮ ಗಡುಸಾದ ಹಾಗೂ ತಾರಕ ಸ್ವರಗಳಿಂದ ಗುರುತಾಗಿದ್ದಾರೆ. ಈಗ ಅಂಥದ್ದೇ ಸದ್ದು ಮಾಡುತ್ತಿರುವ ಇನ್ನೊಬ್ಬ ಗಾಯಕಿ ಜಾಸ್ಮಿನ್ ಸ್ಯಾಂಡಲ್ಸ್.

'ಧುರಂಧರ್: ದಿ ರಿವೆಂಜ್' ಹಿಂದಿ ಸಿನಿಮಾದಲ್ಲಿ 'ಜಾಯೆ ಸಜ್ನಾ' ಎಂಬ ಜಾಸ್ಮಿನ್ ಕಂಠದ ಹಾಡು ಈಗ ಅನೇಕರ ಜಿಹ್ವೆಗಳ ಮೇಲೆ ನಲಿದಾಡುತ್ತಿದೆ. ಕೆಲವರು ಈ ಹಾಡನ್ನೇ ಮತ್ತೆ ಅನುಕರಿಸಿ ಹಾಡಿ, ರೀಲ್ಸ್ ಮಾಡುತ್ತಿದ್ದಾರೆ. ಸತಿಂದರ್ ಸರ್ತಾಜ್ ಅವರೂ ಆ ಹಾಡಿನ ನಡುವೆ ಕೆಲವು ಕಾಡುವ ಸಾಲುಗಳನ್ನು ಹಾಡಿದ್ದಾರೆ. ಭಾವದ ಅಲೆಗಳನ್ನು ಎಬ್ಬಿಸುವಷ್ಟು ಶಕ್ತವಾದ ಈ ಪಂಜಾಬಿ ಶೈಲಿಯ ಹಾಡು ಸಿನಿಮಾದಲ್ಲಿ ಹಿನ್ನೆಲೆಯಲ್ಲಿ ಕೇಳಿಬರುತ್ತದೆ. ಚಿತ್ರ ನೋಡಿದೊಡನೆ ಅದರ ಪರಿಣಾಮ ಅಷ್ಟಾಗಿ ಮನಸ್ಸಿಗೆ ಇಳಿಯದಿದ್ದರೂ ಆನಂತರ ಅದು ಕಾಡತೊಡಗುತ್ತದೆ. ಈ ಹಾಡಿನ ಸಾಹಿತ್ಯವನ್ನೂ ಸತಿಂದರ್ ಸರ್ತಾಜ್ ಅವರೇ ಬರೆದಿದ್ದಾರೆ. ಭಾರತೀಯ–ಅಮೆರಿಕದ ಹಾಡುಗಾರ್ತಿ ಜಾಸ್ಮಿನ್ ಚಿತ್ರಗೀತೆ ಹಾಡತೊಡಗಿ ದಶಕವೇ ಉರುಳಿದೆ. 'ಕಿಕ್' ಹಿಂದಿ ಚಿತ್ರದಲ್ಲಿ 'ಯಾರ್ ನಾ ಮಿಲೆ' ಗೀತೆಗೆ ಕಂಠ ನೀಡುವ ಮೊದಲೇ ಅವರು ತಮ್ಮದೇ ಆಲ್ಬಂ ಗೀತೆಗಳನ್ನು ಬಿಡುಗಡೆ ಮಾಡಿದ್ದರು. 2007ರಲ್ಲಿ 'ಮುಸ್ಕಾನ್' ಎಂಬ ಅವರ ಹಾಡಿಗೆ ಜನಮನ್ನಣೆ ಸಂದಿತ್ತು.

ಜಲಂಧರ್‌ನಲ್ಲಿ ಹುಟ್ಟಿದ ಜಾಸ್ಮಿನ್ ಬೆಳೆದದ್ದೆಲ್ಲ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ. ಶಾಲಾ ದಿನಗಳಲ್ಲಿ ಅಜ್ಜಿ ಬೆನ್ನುತಟ್ಟಿದ್ದರಿಂದ ವೇದಿಕೆ ಹತ್ತಿ ಹಾಡಲಾರಂಭಿಸಿದರು. ಪಂಜಾಬಿ ಜನಪದ ಇವರ ಶೈಲಿಯಲ್ಲಿ ಬೆರೆತುಕೊಂಡಿತು. ಅದೇ ಈಗ 'ಧುರಂಧರ್' ಹಾಡಿನ ಯಶಸ್ಸಿಗೂ ಕಾರಣವಾಗಿದೆ. ■